# All India Radio: Bangalore
# National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**17.02.2025** **19.35 P.m.**

****************

ಮುಖ್ಯಾಂಶಗಳು

- **ಎಂಎಸ್ಎಂಇ ಗಳಿಗಾಗಿ ಪರಸ್ಪರ ಖಾತರಿ ಯೋಜನೆಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ**
- **ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಎರಡು ಹೊಸ ವೈಶಿಷ್ಟ್ಯಗಳ ಸೇರ್ಪಡೆ– ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್**
- **ರಾಷ್ಟ್ರೀಯ ನಗರ ಜನವಸತಿ ಸಮೀಕ್ಷೆ–'ನಕ್ಷಾ'ಗೆ ಕೇಂದ್ರ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ನಾಳೆ ಚಾಲನೆ**
- **ಭಾರತದ ಸ್ಮಾರ್ಟ್ ಫೋನ್ ರಫ್ತು ಮೌಲ್ಯ 1.55 ಟ್ರಿಲಿಯನ್ ರೂಪಾಯಿಗೆ ಏರಿಕೆ**
- **ಡಬ್ಲ್ಯೂಪಿಎಲ್ ಕ್ರಿಕೆಟ್: ಡೆಲ್ಲಿ ಕ್ಯಾಪಿಟಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು ಮುಖಾಮುಖಿ**

****************

ಪಂಜಾಬ್ ಪ್ರವಾಸದಲ್ಲಿರುವ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು, ಮೊಹಾಲಿಯ ರಾಷ್ಟ್ರೀಯ ಕೃಷಿ, ಆಹಾರ ಮತ್ತು ಜೈವಿಕ ಉತ್ಪಾದನಾ ಸಂಸ್ಥೆ– NABI ಯಲ್ಲಿಂದು 'ಮುಂದುವರಿದ ಉದ್ಯಮ ಶೀಲತೆ ಮತ್ತು ಕೌಶಲ್ಯಾಭಿವೃದ್ಧಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಶೈಕ್ಷಣಿಕ ಮತ್ತು ವೈಜ್ಞಾನಿಕ ಸಂಶೋಧನೆಗಳು ವಿಕಸಿತ ಭಾರತ ಗುರಿ ಸಾಧನೆಗೆ ಹಾಗೂ ಕೃಷಿ ಅಭಿವೃದ್ಧಿಗೆ ನೆರವಾಗಬೇಕು ಎಂದು ಹೇಳಿದರು.

ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆಗೆ ಸರ್ಕಾರ ಉತ್ತೇಜನ ನೀಡಿದ್ದು, ಸಂಶೋಧನೆಗಳ ಲಾಭ ರೈತರಿಗೆ ದೊರೆಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಯುವ ಸಂಶೋಧಕರು ಮತ್ತು ನಾವೀನ್ಯತೆ ವಲಯದ ನಾಯಕರು ತಮ್ಮ ಪಾತ್ರ ನಿಭಾಯಿಸಬೇಕು ಎಂದು ಕರೆ ನೀಡಿದರು.

**ಧ್ವನಿ: ಉಪರಾಷ್ಟ್ರಪತಿ**

ಕೆಲವೊಮ್ಮೆ ಬೇಡಿಕೆಗಿಂತ ಪೂರೈಕೆ ಹೆಚ್ಚಾಗಿ ದರ ಕುಸಿತ ಉಂಟಾಗುತ್ತದೆ. ಬೆಲೆ ಕುಸಿದಾಗ ರೈತರು ಟೊಮ್ಯಾಟೊ ಮತ್ತಿತರ ಉತ್ಪನ್ನಗಳನ್ನು ಬೀದಿಗೆ ಸುರಿಯುವುದು ಸಾಮಾನ್ಯವಾಗಿದೆ. ಇಂತಹ ಸಂದರ್ಭದಲ್ಲಿ ನಾವೀನ್ಯತೆ ಉದ್ಯಮಿಗಳು ರೈತರ ಉತ್ಪನ್ನಗಳಿಗೆ ಮೌಲ್ಯ ವರ್ಧನೆ ಮಾಡುವ ಕೆಲಸಕ್ಕೆ ಮುಂದಾಗಬೇಕು ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಸಲಹೆ ನೀಡಿದರು.

****************

ಮುಂಬೈನಲ್ಲಿಂದು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು–ಎಂಎಸ್ಎಂಇ ಗಳಿಗಾಗಿ ಪರಸ್ಪರ ಖಾತರಿ ಯೋಜನೆಗಳಿಗೆ ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಎಂಎಸ್ಎಂಇಗಳಿಗೆ ಈ ಯೋಜನೆಯು ಉತ್ತೇಜನ ನೀಡುತ್ತಿದೆ. ಕಳೆದ ಮೂರು ಬಜೆಟ್‌ಗಳಲ್ಲಿ ಎಂಎಸ್ಎಂಇಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಯೋಜನೆಯು ಎಂಎಸ್ಎಂಇಗಳಿಗೆ ಯಂತ್ರೋಪಕರಣಗಳು ಅಥವಾ ಉಪಕರಣಗಳನ್ನು ಖರೀದಿಸಲು 100 ಕೋಟಿ ರೂಪಾಯಿಗಳವರೆಗೆ ಸಾಲ ನೀಡುವುದನ್ನು ಸುಗಮಗೊಳಿಸುತ್ತದೆ ಎಂದು ತಿಳಿಸಿದರು.

ಹೂಡಿಕೆಗಳು ಉತ್ತಮ ಲಾಭವನ್ನು ನೀಡುವ ವಾತಾವರಣವನ್ನು ಭಾರತ ಈಗ ಹೊಂದಿದೆ. ಸರ್ಕಾರವು ಅನುಕೂಲಕರ ನೀತಿಗಳ ಮೂಲಕ ರಕ್ಷಣಾ ಉತ್ಪಾದನಾ ವಲಯವನ್ನು ಬೆಂಬಲಿಸಿದೆ. ಇದರಿಂದಾಗಿ ಭಾರತದ ರಕ್ಷಣಾ ರಫ್ತು 24 ಸಾವಿರ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

**ಧ್ವನಿ: ನಿರ್ಮಲಾ ಸೀತಾರಾಮನ್**

****************

ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಎರಡು ಹೊಸ ವೈಶಿಷ್ಟ್ಯಗಳನ್ನು ಸೇರಿಸಲಾಗಿದೆ. ಇದು ಉದ್ಯೋಗ ಆಕಾಂಕ್ಷಿಗಳನ್ನು ಮಾತ್ರವಲ್ಲದೇ, ಉದ್ಯೋಗ ಸೃಷ್ಟಿಕರ್ತರನ್ನು ಸಹ ರೂಪಿಸುತ್ತದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ನವದೆಹಲಿಯ ದೆಹಲಿ ವಿಶ್ವವಿದ್ಯಾಲಯದ ಹಿಂದೂ ಕಾಲೇಜಿನ 126ನೇ ಸಂಸ್ಥಾಪನಾ ದಿನಾಚರಣೆ ಉದ್ದೇಶಿಸಿ ಮಾತನಾಡಿದ ಅವರು, ದೇಶದ ಯುವಕರಿಗೆ ಉದ್ಯೋಗ ಭದ್ರತೆ, ಯೋಗ್ಯ ಜೀವನ, ಆರ್ಥಿಕ ಸಬಲೀಕರಣ ಸೇರಿದಂತೆ ಇತರೆ ಅಗತ್ಯಗಳ ಕುರಿತು ಒತ್ತಿ ಹೇಳಿದರು.

ದೇಶಾದ್ಯಂತ ಸಂಶೋಧನೆಗೆ ಉತ್ತೇಜನೆ ನೀಡಲಾಗುತ್ತಿದೆ. ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವನ್ನು ರಚಿಸಲು ಸರ್ಕಾರ ಉದ್ದೇಶಿಸಿದೆ. ಭಾರತೀಯ ಕೈಗಾರಿಕೆಗಳಿಗೆ 1 ಲಕ್ಷ ಕೋಟಿ ರೂಪಾಯಿಗಳ ಬಡ್ಡಿ ರಹಿತ ಸಾಲ ಲಭ್ಯವಿದೆ. ವಿದ್ಯಾರ್ಥಿಗಳು ಈ ಹಣವನ್ನು ಸಂಶೋಧನೆ ಮತ್ತು ನಾವೀನ್ಯತೆಗಾಗಿ ಬಳಸುವಂತೆ ಸಚಿವ ಧರ್ಮೇಂದ್ರ ಪ್ರಧಾನ್ ಸಲಹೆ ನೀಡಿದರು.

****************

26 ರಾಜ್ಯಗಳ 152 ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಷ್ಟ್ರೀಯ ಭೂ–ಪ್ರಾದೇಶಿಕ ಜ್ಞಾನ ಆಧಾರಿತ ನಗರ ಜನವಸತಿ ಸಮೀಕ್ಷೆ–'ನಕ್ಷಾ'ಗೆ ನಾಳೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಚಾಲನೆ ನೀಡಲಿದ್ದಾರೆ.

ಭೂ ಮಾಲೀಕತ್ವದ ನಿಖರ ಮತ್ತು ವಿಶ್ವಾಸಾರ್ಹ ದಾಖಲಾತಿಯನ್ನು ಖಚಿತಪಡಿಸಿಕೊಳ್ಳಲು ನಗರ ಪ್ರದೇಶಗಳಲ್ಲಿ ಭೂ ದಾಖಲೆಗಳನ್ನು ರಚಿಸುವುದು ಮತ್ತು ನವೀಕರಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ. ಈ ಉಪಕ್ರಮವು ನಗರ ಯೋಜನೆಯನ್ನು ಹೆಚ್ಚಿಸುತ್ತದೆ ಮತ್ತು ಭೂ–ಸಂಬಂಧಿತ ವಿವಾದಗಳನ್ನು ಕಡಿಮೆ ಮಾಡುತ್ತದೆ ಎಂದು ಸಚಿವಾಲಯ ಹೇಳಿದೆ.

ಆಸ್ತಿ ದಾಖಲೆಗಳ ಮಾಹಿತಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯು ಪಾರದರ್ಶಕತೆ, ದಕ್ಷತೆಯನ್ನು ಹೆಚ್ಚಿಸಿ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ.

****************

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದು, ವಿಶ್ವದ ಅತಿದೊಡ್ಡ 10 ಟನ್ ರಾಕೆಟ್ ಇಂಧನ ಮಿಶ್ರಣ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದೆ. ಇಸ್ರೋದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ಹಾಗೂ ಬೆಂಗಳೂರಿನ ಕೇಂದ್ರ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ ಸಹಯೋಗದಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ.

ಈ ಇಂಧನ ಮಿಶ್ರಣ ಘಟಕ 150 ಟನ್ ತೂಕ, 8.7 ಮೀಟರ್ ಎತ್ತರ, 5.4 ಮೀಟರ್ ಉದ್ದ ಹಾಗೂ 3.3 ಮೀಟರ್ ಅಗಲವಿದ್ದು, ಇದನ್ನು ಸಾಲಿಡ್ ರಾಕೆಟ್ ಮೋಟಾರ್‌ಗಳಿಗಾಗಿ ಅಭಿವೃದ್ಧಿಪಡಿಸಲಾಗಿದೆ.

****************

ಸ್ಮಾರ್ಟ್ ಫೋನ್ ರಫ್ತಿನಲ್ಲಿ ಭಾರತ ಐತಿಹಾಸಿಕ ದಾಖಲೆ ಮಾಡಿದ್ದು, 2024ರ ಏಪ್ರಿಲ್ ನಿಂದ 2025ರ ಜನವರಿ ಅವಧಿಯಲ್ಲಿ ರಫ್ತು ಮೌಲ್ಯ 1.55 ಟ್ರಿಲಿಯನ್ ರೂಪಾಯಿ ತಲುಪಿದೆ.

ಉತ್ಪನ್ನ ಆಧಾರಿತ ಭತ್ಯೆ–ಪಿಎಲ್‌ಐ ಯೋಜನೆಯಿಂದ ರಫ್ತಿಗೆ ಹೆಚ್ಚಿನ ಉತ್ತೇಜನ ದೊರಕಿದ್ದು, ಜನವರಿ ತಿಂಗಳಲ್ಲಿ ರಫ್ತು ಮೌಲ್ಯ 250 ಶತಕೋಟಿ ರೂಪಾಯಿ ತಲುಪಿದೆ. ಇದು ಈವರೆಗಿನ ಗರಿಷ್ಠ ರಫ್ತು ದಾಖಲೆಯಾಗಿದ್ದು, 2024ರ ಜನವರಿಗೆ ಹೋಲಿಸಿದರೆ, ಶೇಕಡ 140ರಷ್ಟು ಏರಿಕೆಯಾಗಿದೆ.

ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ, ಕಳೆದ 10 ತಿಂಗಳಲ್ಲಿ ರಫ್ತು ಪ್ರಮಾಣ ಶೇಕಡ 56 ರಷ್ಟು ಹೆಚ್ಚಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.

****************

ಗಡಿಭದ್ರತಾ ಪಡೆ–ಬಿಎಸ್‌ಎಫ್ ಮತ್ತು ಬಾಂಗ್ಲಾದೇಶ ಗಡಿ ಕಾವಲು ಪಡೆ–ಬಿಜಿಬಿ ನಡುವಿನ 55ನೇ ಮಹಾನಿರ್ದೇಶಕರ ಮಟ್ಟದ ಗಡಿ ಸಮನ್ವಯ ಸಮ್ಮೇಳನ ನವದೆಹಲಿಯಲ್ಲಿಂದು ಪ್ರಾರಂಭವಾಯಿತು.

ಈ ಸಮ್ಮೇಳನವು ಇದೇ 20 ರಂದು ಮುಕ್ತಾಯಗೊಳ್ಳಲಿದೆ. ಬಿಎಸ್‌ಎಫ್ ನಿಯೋಗದ ನೇತೃತ್ವವನ್ನು ಬಿಎಸ್‌ಎಫ್ ಮಹಾನಿರ್ದೇಶಕ ದಲ್ಜಿತ್ ಸಿಂಗ್ ಚೌಧರಿ ವಹಿಸಿದ್ದರೆ, ಬಿಜಿಬಿ ನಿಯೋಗದ ನೇತೃತ್ವವನ್ನು ಬಿಜಿಬಿ ಮಹಾನಿರ್ದೇಶಕ ಮೇಜರ್ ಜನರಲ್ ಮೊಹಮ್ಮದ್ ಅಶ್ರಫ್‌ಹುಜ್ ಜಮಾನ್ ಸಿದ್ದಿಕಿ ವಹಿಸಿದ್ದರು.

ಉತ್ತಮ ಸಮನ್ವಯಕ್ಕಾಗಿ ಗಡಿ ಕಾವಲು ಪಡೆಗೆ ನಡುವೆ ಗಡಿಗೆ ಸಂಬಂಧಿಸಿದಂತೆ ವಿಷಯಗಳ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚಿಸಲಾಗುತ್ತದೆ.

****************

ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹಾಗೂ ಇತರೆ ಮೂವರು ಬಿಜೆಪಿ ಶಾಸಕರನ್ನು ವಿಧಾನಸಭೆಯಿಂದ 30 ದಿನಗಳ ಅವಧಿಗೆ ಅಥವಾ ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವವರೆಗೆ ಅಮಾನತುಗೊಳಿಸಲಾಗಿದೆ.

ಇಂದು ಕಲಾಪ ಆರಂಭವಾದಾಗ, ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸರಸ್ವತಿ ಪೂಜೆಗೆ ವಿರೋಧ ವ್ಯಕ್ತವಾಗಿದೆ ಎಂಬ ಆರೋಪ ಕುರಿತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿಕೆ ನೀಡುವಂತೆ ಬಿಜೆಪಿ ಒತ್ತಾಯಿಸಿತು.

ಅಗ್ನಿಪಾಲ್ ಮಿತ್ರ ನೇತೃತ್ವದ ಬಿಜೆಪಿಯ ಮಹಿಳಾ ಸದಸ್ಯರು ಈ ವಿಷಯದ ಕುರಿತು ನಿರ್ಣಯ ಮಂಡಿಸಿದರು. ವಿಧಾನಸಭಾಧ್ಯಕ್ಷ ಬಿಮನ್ ಬಂಡೋಪ್ಯಾಧ್ಯಾಯ ಪ್ರಸ್ತಾವನೆಗೆ ಅವಕಾಶ ನೀಡಿದರು. ಆದರೆ, ಈ ಬಗ್ಗೆ ಚರ್ಚೆ ನಡೆಸಲು ಅನುಮತಿ ನಿರಾಕರಿಸಿದರು.

ನಂತರ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ನೇತೃತ್ವದಲ್ಲಿ ಬಿಜೆಪಿ ಸದಸ್ಯರು ಸದನದ ಬಾವಿಗಿಳಿದು ಘೋಷಣೆ ಕೂಗಿದರು. ಬಿಜೆಪಿ ಶಾಸಕರ ವರ್ತನೆಗೆ ಸ್ಪೀಕರ್ ಅಸಮಾಧಾನ ವ್ಯಕ್ತಪಡಿಸಿದರು. ಬಿಜೆಪಿ ಶಾಸಕರು ಸದನದಿಂದ ಹೊರನಡೆದು ವಿಧಾನಸಭೆಯ ಹೊರಗೆ ಪ್ರತಿಭಟನೆ ನಡೆಸಿದರು.

ಆಡಳಿತಾರೂಢ ತೃಣಮೂಲ ಕಾಂಗ್ರೆಸ್‌ನ ಮುಖ್ಯ ಸಚೇತಕ ನಿರ್ಮಲ್ ಘೋಷ್, ಸುವೇಂದು ಅಧಿಕಾರಿ ಮತ್ತು ಇತರೆ ಬಿಜೆಪಿ ಶಾಸಕರ ನಡಾವಳಿಕೆಯನ್ನು ಟೀಕಿಸುವ ನಿರ್ಣಯವನ್ನು ಮಂಡಿಸಿ, ಅವರ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದರು.

ನಂತರ ಸುವೇಂದು ಅಧಿಕಾರಿ, ಅಗ್ನಿಮಿತ್ರ ಪಾಲ್, ಬಿಸ್ವನಾಥ್ ಕರಕ್ ಮತ್ತು ಬಂಕಿಮ್ ಘೋಷ್ ಅವರನ್ನು ಅಮಾನತುಗೊಳಿಸಿ ಸದನದಲ್ಲಿ ಧ್ವನಿಮತದೊಂದಿಗೆ ನಿರ್ಣಯವನ್ನು ಅಂಗೀಕರಿಸಲಾಯಿತು.

****************

ಫ್ರಾನ್ಸ್‌ನ ರಾಷ್ಟ್ರೀಯ ಆರೋಗ್ಯ ಮತ್ತು ಸಂಶೋಧನಾ ಸಂಸ್ಥೆಯ ಹೊಸ ಅಧ್ಯಯನವು ತರಕಾರಿಗಳನ್ನು ತಿನ್ನುವುದರಿಂದ ಸಿರೋಸಿಸ್ ರೋಗಿಗಳಲ್ಲಿ ಯಕೃತ್ತಿನ ಕ್ಯಾನ್ಸರ್ ಅಪಾಯವನ್ನು ಶೇಕಡ 65 ರಷ್ಟು ತಗ್ಗಿಸಬಹುದು ಎಂದು ತಿಳಿಸಿದೆ.

ದಿನಕ್ಕೆ 240 ಗ್ರಾಮ್‌ಗಿಂತ ಹೆಚ್ಚು ತರಕಾರಿಗಳನ್ನು ಸೇವಿಸುವ ರೋಗಿಗಳಿಗೆ ಯಕೃತ್ತಿನ ಕ್ಯಾನ್ಸರ್‌ನ ಅಪಾಯ ಕಡಿಮೆಯಾಗುತ್ತದೆ. ದೀರ್ಘಕಾಲದ ಯಕೃತ್ತಿನ ಕಾಯಿಲೆಯಿರುವ ಸಿರೋಸಿಸ್ ರೋಗಿಗಳಲ್ಲಿ ಹೆಚ್ಚಾಗಿ ಕ್ಯಾನ್ಸರ್ ಬೆಳೆಯುತ್ತದೆ. ಮದ್ಯ ಸೇವನೆ, ವೈರಲ್ ಹೆಪಟೈಟೀಸ್, ಬೊಜ್ಜು ಮತ್ತು ಕಲುಷಿತ ಆಹಾರದಿಂದಾಗಿ ಅಫ್ಲಾಟಾಕ್ಸಿನ್‌ಗಳಿಗೆ ಒಡ್ಡಿಕೊಳ್ಳುವಂತಹ ಅಂಶಗಳಿಂದ ಸಿರೋಸಿಸ್ ಉಂಟಾಗುತ್ತದೆ.

****************

ಗುಜರಾತ್‌ನ ವಡೋದರಾದ ಕೋಟಂಬಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್–ಡಬ್ಲ್ಯೂಪಿಎಲ್ ಪಂದ್ಯದಲ್ಲಿ ಇಂದು ಡೆಲ್ಲಿ ಕ್ಯಾಪಿಟಲ್ಸ್ ತಂಡ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಿದ್ದು, ಪಂದ್ಯ ಪ್ರಗತಿಯಲ್ಲಿದೆ.

********ಮುಕ್ತಾಯ*******